## ಶ್ವೇತ ಸುಂದರಿ

ಈಚೆಗೆ ಊರಿಗೆ ಹೋಗಿದ್ದಾಗ ಪಕ್ಕದ ಮನೆಯ ತೋಟದಲ್ಲಿ ತೆಂಗಿನ ಮರದ ಕಾಂಡಕ್ಕೆ ಸುತ್ತಿಕೊಂಡ ಹೂಗೊಂಚಲೊಂದು ಕಾಣಿಸಿತು. ಅಚ್ಚರಿಯಿಂದ ಹತ್ತಿರ ಹೋಗಿ ನೋಡಿದಾಗ ತೆಂಗಿನ ಮರದ ಸಣ್ಣ ಕುಳಿಯಂತಹ ಜಾಗದಲ್ಲಿ ಬದನಿಕೆಯೊಂದು ಇಳಿಮುಖವಾಗಿ ಬೆಳೆದಿತ್ತು. ಬುಡದಲ್ಲಿ ಹುಲ್ಲಿನಂತಹ ರಚನೆ, ನಾಲ್ಕಾರು ಕಡ್ಡಿಗಳ ಕೊನೆಯಲ್ಲಿ ಬೆಳ್ಳಗಿನ ಸುಂದರ ಹೂವುಗಳು ಇದ್ದವು. ಬಾಲ್ಯದಲ್ಲಿ ಕಾಡಿನಲ್ಲಿ ಅಡ್ಡಾಡುತ್ತಿದ್ದಾಗ ಮರದ ಪೊಟರೆಗಳಲ್ಲಿ ಇಂತಹವನ್ನು ನೋಡಿದ್ದೆ. ಈಗ ಇದು ಕಾಡಿನಿಂದ ನಾಡಿಗೆ ಬಂದದ್ದು ನೋಡಿ ಸಂತೋಷಪಟ್ಟು ಫೋಟೊ ಕ್ಲಿಕ್ಕಿಸಿದೆ. ಸ್ಥಳೀಯ ತುಳುಭಾಷೆಯಲ್ಲಿ ಇದನ್ನು 'ವರ್ಲಬಾರ್' ಅಂತ ಕರೆಯುತ್ತಾರೆ. ಈ ಹೂವುಗಳು ಮಳೆಗಾಲ, ಚಳಿಗಾಲದಲ್ಲಿ ಅರಳುತ್ತವೆ.

–ಶಾಲಿನಿ ನಾಯಕ್, ಬೆಂಗಳೂರು



## ಮಿನುಗುವ 'ಖೈರೇಸ್ ಶೀಲ್ಡ್ ಟೈಲ್'



ಹಾವು ಎಂದೊಡನೆ ವಿಷಪೂರಿತ ನಾಗರಹಾವೋ ಅಥವಾ ಹೆಬ್ಬಾವೋ ನೆನಪಿಗೆ ಬರುವುದು ಸಹಜ. ಆದರೆ ಧರೆಯಲ್ಲಿ ವಿಚಿತ್ರ ರೂಪದ ಥರಾವರಿ ಪ್ರಭೇದದ ಹಾವುಗಳು ನೆಲೆಕಂಡುಕೊಂಡಿವೆ. ಅದರಲ್ಲಿ ಈ 'ಖೈರೇಸ್ ಶೀಲ್ಡ್ ಟೈಲ್' ಎಂದು ಕರೆಸಿಕೊಂಡಿರುವ ಈ ಹಾವು ಕೂಡ ಒಂದು. ಈ ಹಾವು ಪಶ್ಚಿಮ ಘಟ್ಟದ ಕಾಡುಗಳಲ್ಲಿ ಕಂಡುಬರುತ್ತವೆ. ನಮ್ಮವರೇ ಆದ ಸರೀಸೃಪ ವಿಜ್ಞಾನಿ ನೀಲಿಂ ಕುಮಾರ್ ಖೈರೆ (Neelim Kumar Khaire) ಅವರ ಗೌರವಾರ್ಥ ಹಾವಿಗೆ ಈ ಹೆಸರು ಇಡಲಾಗಿದೆ.

–ಶ್ರೀನಿವಾಸನ್ ಎಸ್.ಕೆ., ಬೆಂಗಳೂರು



## ಬೆಂಕಿಯಲ್ಲಿ ಅರಳುವ ದೊನ್ನೆ ಬಾಳೆ

ಮಲೆನಾಡಿನಲ್ಲಿ ಮದುವೆ, ಮುಂಜಿ ಮುಂತಾದ ಕಾರ್ಯಕ್ರಮಗಳಲ್ಲಿ ನೆರೆಹೊರೆಯವರು ಒಬ್ಬರಿಗೊಬ್ಬರು ನೆರವಾಗುತ್ತಾರೆ. ಊರಿನ ಹೆಂಗಸರು ಒಂದು ವಾರ ಮುಂಚಿತವಾಗಿಯೇ ಕಾರ್ಯಕ್ರಮ ನಡೆಯುವ ಮನೆಗೆ ಬಂದು ಭತ್ತದಿಂದ ಅರಳು ಹುರಿಯುವುದು, ಅವಲಕ್ಕಿ, ಕಾಳು ಬೇಳೆಗಳನ್ನು ಸ್ವಚ್ಛಗೊಳಿಸುವುದು, ಬಾಗಿಲಿನ ಹೊಸ್ತಿಲುಗಳಿಗೆ ಎಳೆ ತೆಗೆಯುವುದು... ಇಂತಹ ಕೆಲಸಗಳಲ್ಲಿ ತೊಡಗುತ್ತಾರೆ. ಗಂಡಸರು ಚಪ್ಪರ, ತೋರಣ, 'ದೊನ್ನೆ ಬಾಳೆ' ಮಾಡುವುದರಲ್ಲಿ ತೊಡಗುತ್ತಾರೆ.

'ದೊನ್ನೆ ಬಾಳೆ' ಮಾಡುವ ಕೆಲಸವು ಕಾರ್ಯಕ್ರಮದ ಮುನ್ನಾ ದಿನ ಬಹಳ ಸಂಭ್ರಮದಿಂದ ನಡೆಯುತ್ತದೆ. ಇದರಲ್ಲಿ ಗಂಡಸರು, ಹೆಂಗಸರು ಸಾಮೂಹಿಕವಾಗಿ ಭಾಗಿಯಾಗುತ್ತಾರೆ. 'ದೊನ್ನೆ ಬಾಳೆ' ಅಂದ್ರೆ ಊಟಕ್ಕೆ ಬಾಳೆ ಎಲೆಗಳನ್ನು ಒಂದೇ ಅಳತೆಗೆ ತಕ್ಕಂತೆ ಕತ್ತರಿಸಿ ಅದನ್ನು ಸ್ವಚ್ಛಗೊಳಿಸುತ್ತಾರೆ. ದೊನ್ನೆ ಅಂದ್ರೆ ಹಿಂದಿನ ಕಾಲದಲ್ಲಿ ಲೋಟಗಳಾಗಲಿ, ಬೌಲ್‌ಗಳಾಗಲಿ ಬಳಕೆಯಲ್ಲಿ ಇರಲಿಲ್ಲ. ಬಾಳೆ ಎಲೆಗಳನ್ನು ಬೆಂಕಿಯಲ್ಲಿ ಬಾಡಿಸಿ ಅದನ್ನು ಬಿದಿರು ಕಡ್ಡಿಗಳನ್ನು ಉಪಯೋಗಿಸಿ ಬೌಲ್ ಆಕಾರದಲ್ಲಿ ಮಾಡುತ್ತಿದ್ದರು. ಈಗ ಸ್ಟೀಲ್ ಲೋಟಗಳು ಬಳಕೆಯಲ್ಲಿರುವುದರಿಂದ ದೊನ್ನೆಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿವೆಯಾದರೂ ಬಾಳೆ ಜೊತೆಗೆ ದೊನ್ನೆಯನ್ನೂ ಸೇರಿಸುವುದು ವಾಡಿಕೆ. ಕಾರ್ಯದ ಮುನ್ನಾದಿನ 'ದೊನ್ನೆ ಬಾಳೆ' ಮಾಡುವ ಕೆಲಸ ಸಂಭ್ರಮದಿಂದ ನಡೆಯುತ್ತದೆ. ಆ ಸಮಯದಲ್ಲಿ ಒಂದಷ್ಟು ಮಾತುಕತೆ, ಹಾಸ್ಯಚಟಾಕಿ ನಡೆಯುತ್ತದೆ. ಒಗ್ಗಟ್ಟಿನಲ್ಲಿ ನಿರ್ವಹಿಸುವುದರಿಂದ ಕೆಲಸಗಳೆಲ್ಲ ಹೂ ಎತ್ತಿದ ಹಾಗೆ ಸುಲಭವಾಗಿ ಸಾಗುತ್ತದೆ. ಕೊನೆಯಲ್ಲಿ ದೊನ್ನೆ ಬಾಳೆ ಮಾಡಿದವರಿಗೆ ಮರ್ಯಾದೆ ಮಾಡೋದು (ಗೌರವ ಸಲ್ಲಿಸಲು) ಅಂತ ಮಸಾಲೆ ಅವಲಕ್ಕಿಯನ್ನು ರುಚಿರುಚಿಯಾಗಿ ತಯಾರಿಸಿ ಸಾಮೂಹಿಕವಾಗಿ ಸವಿಯುತ್ತಾರೆ.

–ಸುಭದ್ರಾ, ನೇಗಿಲೋಣಿ, ಬೆಂಗಳೂರು



**ನೀವೂ ಬರೆಯಿರಿ**

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ. **ವಿಳಾಸ:** editorsu@sudha.co.in